ಶ್ರೀ ಎಂ. ಮಹದೇವ (ರೇಷ್ಮೆ ಮತ್ತು ಜವಳಿ ಸಚಿವರು) :—

ಅ) "ರೇಷ್ಮೆ ಸಂಪತ್ತು" ಯೋಜನೆಯನ್ನು ಜಾರಿಗೆ ತರುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.

ಈ ಯೋಜನೆಯ ಮುಖ್ಯಾಂಶಗಳು:

1. ಹಿಪ್ಪುನೇರಳೆ ವಿಸ್ತೀರ್ಣ ಹೆಚ್ಚಿಸುವುದು.
2. ರೇಷ್ಮೆ ಉತ್ಪಾದನೆಯನ್ನು ಅಧಿಕಗೊಳಿಸುವುದು.
3. ರೇಷ್ಮೆ ಉತ್ಪಾದಕತೆ ಹೆಚ್ಚಿಸುವುದು.
4. ಅಂತರರಾಷ್ಟ್ರೀಯ ಗುಣಮಟ್ಟದ ರೇಷ್ಮೆ ಉತ್ಪಾದಿಸುವುದು.
5. ಉತ್ಪಾದನಾ ವೆಚ್ಚ ಕಡಿಮೆ ಮಾಡಿ ಗುಣಮಟ್ಟದ ರೇಷ್ಮೆ ಉತ್ಪಾದಿಸುವುದು.

ರೇಷ್ಮೆ ಬೆಳೆಗಾರರು, ಖಾಸಗಿ ಮೊಟ್ಟೆ ತಯಾರಿಕರು, ಜಾಕಿ ಸಾಕಾಣಿಕೆದಾರರು, ರೀಲರುಗಳ ಸಹಕಾರ ಸಂಘಗಳಿಗೆ ಸಹಾಯಧನ ಒದಗಿಸುವುದು ಮತ್ತು ತರಬೇತಿ ಕಾರ್ಯಕ್ರಮಗಳಿಂದ ರಾಜ್ಯದಲ್ಲಿ ರೇಷ್ಮೆ ಉತ್ಪಾದನೆ, ಉತ್ಪಾದಕತೆ ಮತ್ತು ಗುಣಮಟ್ಟ ಹೆಚ್ಚಿಸುವುದು. ಈ ಯೋಜನೆಯನ್ನು ತಯಾರಿಸಿ ಸರ್ಕಾರದ ಮಂಜೂರಾತಿ ಕೋರಲಾಗಿದ್ದು, ರಾಜ್ಯದ 2.50 ಲಕ್ಷ ರೇಷ್ಮೆ ಬೆಳೆಗಾರರು, 120 ಖಾಸಗಿ ರೇಷ್ಮೆ ಮೊಟ್ಟೆ ತಯಾರಿಕರು, 120 ಜಾಕಿ ಸಾಕಾಣಿಕೆದಾರರು ಮತ್ತು 3 ಸಾವಿರ ರೀಲರುಗಳು ಈ ಕಾರ್ಯಕ್ರಮದಿಂದ ಪ್ರಯೋಜನ ಪಡೆಯಲಿದ್ದಾರೆ.

ಆ) ಈ ಯೋಜನೆಗೆ 2001-02ನೇ ಸಾಲಿಗೆ ರೂ. 23.00 ಲಕ್ಷಗಳ ಪ್ರತ್ಯೇಕ ವಂಟನೆ ಇದೆ.

ಈ) ಯೋಜನೆ ಜಾರಿಗೆ ಬಂದಿರುವುದಿಲ್ಲ.

ಮಂಡ್ಯ ನಗರಸಭೆಯಲ್ಲಿ ನಕಲಿ ಖಾತೆಗಳ ತನಿಖೆ ಹಾಗೂ ನಗರ ಸ್ವಚ್ಛ ಮಾಡುವ ಬಗೆಗಿನ ಟೆಂಡರ್

2646(3422) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮಂಡ್ಯ ನಗರಸಭೆಯಲ್ಲಿ ನಕಲಿ ಖಾತೆಗಳನ್ನು ಮಾಡಲಾಗಿದ್ದು ಅದನ್ನು ತನಿಖೆ ನಡೆಸಬೇಕೆಂದು ಮಂಡ್ಯ ನಗರಸಭೆ ನಿರ್ಣಯಿಸಿ ತನಿಖೆಗಾಗಿ ಸರ್ಕಾರಕ್ಕೆ ಮನವಿ ಮಾಡಲಾಗಿದೆಯೇ?

ಅ) ಹಾಗೆ ಮನವಿ ಮಾಡಿದ್ದಲ್ಲಿ, ಸರ್ಕಾರ ಈವರೆವಿಗೆ ಯಾವ ಕ್ರಮ ಕೈಗೊಂಡಿದೆ?

ಇ) ಮಂಡ್ಯ ನಗರಸಭೆಯಲ್ಲಿ ನಗರವನ್ನು ಬೊಕ್ಕಟು ಮಾಡುವುದಕ್ಕಾಗಿ ಖಾಸಗಿಯವರಿಗೆ ಟೆಂಡರ್ ನೀಡಿದ್ದು ಟೆಂಡರ್ ಅವಧಿ ಮುಗಿದಿದ್ದರೂ ಸಹ ಮರು ಟೆಂಡರ್ ಕರೆಯದೆ ಇರುವುದಕ್ಕೆ ಕಾರಣಗಳೇನು?

ಈ) ಮರು ಟೆಂಡರ್ ಕರೆಯುವುದಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :—

ಅ) ಇಲ್ಲ. ಅದಾಗ್ಯೂ ಸಂಬಂಧಪಟ್ಟ ಅಧಿಕಾರಿಗಳು ಯಾರು ಎಂಬುದನ್ನು ಪತ್ತೆ ಹಚ್ಚಲು ಪ್ರಕರಣವನ್ನು ಫೋರೆನ್ಸಿಕ್ ತಂತ್ರಜ್ಞರಿಂದ ತನಿಖೆ ನಡೆಸಲು ಹಾಗೂ ಈ ಸದರಿ ಪ್ರಕರಣದ ಬಗ್ಗೆ ತನಿಖೆ ನಡೆಸಲು ತೀರ್ಮಾನಿಸಿ ಮಂಡ್ಯ ಜಿಲ್ಲಾಧಿಕಾರಿಗಳಿಗೆ ಕೋರಿರುತ್ತಾರೆ.

ಆ) ಈ ಬಗ್ಗೆ ವರದಿ ಬಂದ ನಂತರ ಕಾನೂನು ರೀತಿಯಲ್ಲಿ ಕ್ರಮ ಜರುಗಿಸಲಾಗುವುದು.

ಇ) ಮಂಡ್ಯ ನಗರಸಭೆ ವ್ಯಾಪ್ತಿಯ ವಾರ್ಡ್ ನಂ. 2, 4, 6, 7ನೇ ವಿಭಾಗ ನೈರ್ಮಲ್ಯ ಕೆಲಸವನ್ನು ನಿರ್ವಹಿಸಲು ದಿನಾಂಕ: 24-3-2001ರಂದು ಮರು ಟೆಂಡರ್ ಪ್ರಕಟಿಸಲಾಗಿತ್ತು. ಆದರೆ ಪ್ರಸ್ತುತ ಚುನಾವಣೆ ಘೋಷಿಸಿದ್ದುದ್ದರಿಂದ ಹಾಲಿ ಕಾರ್ಯ ನಿರ್ವಹಿಸುತ್ತಿದ್ದ ಗುತ್ತಿಗೆದಾರರರನ್ನು ಆಡಳಿತ ಹಿತದೃಷ್ಟಿಯಿಂದ ಮುಂದುವರಿಸಲಾಗಿತ್ತು. ಹಾಗೂ ದಿನಾಂಕ: 17-8-2001ರವರೆಗೆ ಅವಧಿಯನ್ನು ನಿಸ್ತರಿಸಲಾಗಿದೆ.

ಈ) ಸ್ಥಗಿತಗೊಳಿಸಲಾಗಿದ್ದ ಟೆಂಡರ್ ಪ್ರತಿಕ್ರಿಯೆ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಕುಂಬಾರರ ಕೋಮಿನ ಗುರುತಿಸುವಿಕೆ

2647 (3435) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) :— ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಕುಂಬಾರರು ಎಂದು ಜಾತಿ ನಮೂದಿಸಿಕೊಂಡಿರುವವರ ಸಂಖ್ಯೆ ಎಷ್ಟು; (ಹಿಂದುಳಿದ ವರ್ಗಗಳ ಆಯೋಗದ ವರದಿ ಅಥವಾ ಜನಗಣತಿ 2001ರ ಆಧಾರದಲ್ಲಿ)

ಆ) ಕುಂಬಾರ ಜಾತಿಯನ್ನು ಸಮಾನಾಂತರವಾಗಿ ಸಂಬೋಧಿಸುವ ಪರ್ಯಾಯ ಶಬ್ದಗಳು ಅಥವಾ ಜಾತಿ ಪದಗಳು ಇದೆಯೇ; ಹಾಗಿದ್ದರೆ ಅವು ಯಾವುವು; (ವಿವರ ಒದಗಿಸುವುದು)